# ಮೇಲ್ಮನೆಗೆ ಅಗೌರವ ತಂದ ಕಾಂಗ್ರೆಸ್

## ಯಾವುದೇ ಘಟನೆಯಾದಾಗ ಪ್ರಚೋದನೆ ಮಾಡಿದವರು ಯಾರು ಎಂಬುದು ಪ್ರಮುಖ । ಸಭಾಪತಿ ಅವರ ಏಕಪಕ್ಷೀಯ ನಿರ್ಧಾರ ಇಷ್ಟೆಲ್ಲಾ ನಡೆಯಲು ಸಾಧ್ಯ । ಸದನದ ಸದಸ್ಯರು ಈ ಕುರಿತು ಪ್ರಸ್ತಾಪ ನೀಡಿದರೆ ಚರ್ಚೆಗೆ ಅವಕಾಶ ನೀಡಬೇಕು

**ವಿಶ್ವವಾಣಿ ಸಂದರ್ಶನ**

**• ವಿಧಾನ ಪರಿಷತ್‌ನಲ್ಲಿ ನಡೆದ ಪ್ರಸಂಗ ಕುರಿತು ಏನು ಹೇಳಲು ಬಯಸುತ್ತೀರಾ?**

ಪ್ರಜಾಪ್ರಭುತ್ವದ ಮೇಲೆ ನಂಬಿಕೆಯೇ ಇಲ್ಲ ಎನ್ನುವಂತ ರೀತಿಯಲ್ಲಿ ಘಟನೆ ನಡೆದಿದೆ. ಇದೊಂದು ದೌರ್ಭಾಗ್ಯದ ಸಂಗತಿ. ಇದು ಕರ್ನಾಟಕ ರಾಜ್ಯದ ಜನತೆಗೆ ಆಗಿರುವಂತ ಮೋಸ ಮತ್ತು ದ್ರೋಹದ ಘಟನೆಯಾಗಿದೆ. ಇಂತಹ ಘಟನೆಗಳು ನಡೆಯಬಾರದು. ಯಾವುದೇ ಘಟನೆಯಾದಾಗ ಪ್ರಚೋದನೆ ಮಾಡಿದವರು ಯಾರು ಎಂಬುದು ಪ್ರಮುಖವಾಗುತ್ತದೆ. ಸಭಾಪತಿ ಕೆ.ಪ್ರತಾಪ್ ಚಂದ್ರ ಶೆಟ್ಟಿ ಅವರು ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾದರು. ಕಾಂಗ್ರೆಸ್ ಪಕ್ಷ ಇಂದು ಯಾವ ರೀತಿ ನಡೆದುಕೊಂಡಿದೆ ಎಂಬುದು ಗೊತ್ತಾಗಿದೆ. ಮೇಲ್ಮನೆಗೆ ತನ್ನದೆ ಆದಗೌರವ ಇದೆ. ಅದನ್ನು ಹಾಳು ಮಾಡುವ ಸಂಸ್ಕೃತಿ ಸೃಷ್ಟಿಯಾಗಿದೆ.



**• ಪರಿಷತ್‌ನಲ್ಲಿ ಪಕ್ಷಗಳು ನಡೆದುಕೊಂಡ ರೀತಿ ಸರಿಯೇ?**

ಪರಿಷತ್‌ನಲ್ಲಿ ನಡೆದ ಘಟನೆ ನೋಡಿ ನನಗೆ ನೋವಾಗಿದೆ. ಇಲ್ಲಿ ಮೂರು ಪಕ್ಷಗಳು ನಡೆದುಕೊಂಡ ರೀತಿ ಸರಿಯಲ್ಲ. ಆದರೆ ಕಾಂಗ್ರೆಸ್ ನವರ ವಿಭಿನ್ನ ವರ್ತನೆ ಬೇಸರ ಮೂಡಿಸಿದೆ. ಸಭಾಪತಿ ಅವರ ಏಕಪಕ್ಷೀಯ ನಿರ್ಧಾರ ಇಷ್ಟೆಲ್ಲಾ ನಡೆಯಲು ಸಾಧ್ಯ. ಸಂಖ್ಯಾಬಲ ಇಲ್ಲವೆಂದ ಮೇಲೆ ಸಭಾಪತಿ ಸ್ಥಾನದಲ್ಲಿ ಕುಳಿತುಕೊಳ್ಳಲು ಅರ್ಹರಲ್ಲ. ಅಲ್ಲದೆ, ಅವಿಶ್ವಾಸ ನಿರ್ಣಯ ಮಂಡನೆಗೆ ಅವಕಾಶ ನೀಡದಿರುವುದು ತಪ್ಪು. ಸದನದ ಸದಸ್ಯರು ಈ ಕುರಿತು ಪ್ರಸ್ತಾಪ ನೀಡಿದ್ದರಿಂದ ಚರ್ಚೆಗೆ ಅವಕಾಶ ನೀಡಬೇಕಾಗಿತ್ತು.

**• ಸದನದಲ್ಲಿ ಸಭಾಪತಿ ಅವರು ಮತಕ್ಕೆ ಹಾಕದಿರುವ ಹುನ್ನಾರವೇನು?**

ಸದನದಲ್ಲಿ ಕಾಂಗ್ರೆಸ್‌ವರಿಗೆ ಸದಸ್ಯರ ಬೆಂಬಲ ಇಲ್ಲ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಹೀಗಾಗಿ ಮತ ಹಾಕುವ ಪ್ರಸಂಗ ಬಂದಿದೆ. ಮತ ಹಾಕುವ ಪ್ರಸಂಗ ಬಂದ ಸಮಯದಲ್ಲಿ ಪ್ರತಾಪ್ ಚಂದ್ರ ಶೆಟ್ಟಿ ಅವರು ಸಭಾಪತಿ ಸೀಟಿನಲ್ಲಿ ಕುಳಿತು ಕೊಳ್ಳಬಾರದಿತ್ತು. ಉಪ ಸಭಾಪತಿ ಮತದಾನ ಆಗುವವರೆಗೂ ಸಭಾಪತಿ ಖುರ್ಚಿಯಲ್ಲಿ ಕುಳಿತು ಕೊಳ್ಳಬೇಕು. ಎಲ್ಲಿ ಅಧಿಕಾರ ಹೋಗುತ್ತೋ ಅಥವಾ ಆಡಳಿತ ಪಕ್ಷದ ಮಸೂದೆಗಳು ಪಾಸ್ ಆಗದಂತೆ ಮಾಡಲು ಇಂತಹ ನಾಟಕ ಅಲ್ಲಿ ನಡೆದಿದೆ.

**• ಕೇಂದ್ರದಲ್ಲೂ ಕಲಾಪದಲ್ಲಿ ಕಾಂಗ್ರೆಸ್ ವರ್ತನೆ ಹೇಗಿದೆ?**

ಕಾಂಗ್ರೆಸ್ ನವರು ದೆಹಲಿಯಲ್ಲಿ ಸಹ ಇದೇ ರೀತಿ ಮಾಡಿದ್ದರು. ಕಾಂಗ್ರೆಸ್ ನವರಿಗೆ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲ. ಕಾಂಗ್ರೆಸ್ ನವರು ಈ ದೇಶ ಆಳುವುದಕ್ಕೆ ಇದ್ದೇವೆ ಎಂದುಕೊಂಡಿದ್ದಾರೆ. ಅಧಿಕಾರದ ಮೋಹ ಅವರಿಗೆ ಇದೆ. ಪರಿಷತ್ ಘಟನೆಗೆ ಕಾಂಗ್ರೆಸ್ ನವರೇ ಹೊಣೆ. ನನ್ನ ಅವಧಿಯಲ್ಲಿಯೂ ಅವಿಶ್ವಾಸ ಮಂಡನೆ ಮಾಡಲಾಗಿತ್ತು. ಕಾಂಗ್ರೆಸ್ ನವರು ನನ್ನ ವಿರುದ್ಧ ಅವಿಶ್ವಾಸ ಮಂಡನೆ ಮಾಡಿದ್ದರು. ಆಗ ಗಾಂಧಿ ಪ್ರತಿಮೆ ಮುಂಭಾಗ ಪ್ರತಿಭಟನೆ ಸಹ ನಡೆಸಿದ್ದರು. ನಾನು ಆಗ ಮತದಾನದ ಸಮಯದಲ್ಲಿ ಉಪ ಸಭಾಪತಿಯನ್ನು ಕುರ್ಚಿಯಲ್ಲಿ ಕೂರಿಸಿದ್ದೆ. ನನಗೆ ಸದಸ್ಯರ ಬೆಂಬಲ ಇದೆ ಎಂಬುದು ಗೊತ್ತಿತ್ತು. ಆದರೂ ಸಹ ಕಾಂಗ್ರೆಸ್ ಅವಿಶ್ವಾಸ ಮಂಡನೆ ಮಾಡಿದ್ದರು. ರಾಜ್ಯ ಸಭೆಯಲ್ಲೂ ಇದೇ ರೀತಿ ನಡೆದಿದೆ.

**• ಕಾಂಗ್ರೆಸ್‌ನ ರಾಜಕೀಯ ಲೆಕ್ಕಾಚಾರದ ಕುರಿತು ಏನು ಹೇಳು ಬಯಸುತ್ತೀರಾ?**

ಸಭಾಪತಿ ಸ್ಥಾನದ ಭವಿಷ್ಯವನ್ನು ರಾಜಕೀಯ ಲೆಕ್ಕಾಚಾರದಡಿ ನೋಡುವುದು ದೌರ್ಭಾಗ್ಯದ ಸಂಗತಿ. ಜತೆಗೆ ಭಂಡತನವೂ ಹೌದು. ನಾನೂ ಕೂಡ 8 ವರ್ಷ ಮೇಲ್ಮನೆ ಸಭಾಪತಿ ಸ್ಥಾನ ನಿರ್ವಹಿಸಿದ್ದೆ. ನನ್ನವಿರುದ್ದವೂ ಅವಿಶ್ವಾಸ ನಿರ್ಣಯ ಮಂಡನೆಯಾಗಿತ್ತು. ಅಂದು ನನಗೆ ಸಂಖ್ಯಾಬಲದ ವಿಶ್ವಾಸವಿತ್ತು. ಆದರೆ ಇಂದಿನ ಸ್ಥಿತಿ ಸಭಾಪತಿ ಸ್ಥಾನದಲ್ಲಿರುವವರಿಗೆ ಪೂರಕವಾಗಿದೆಯೇ ಎನ್ನುವುದು ಪ್ರಶ್ನಾರ್ಹ. ಆದ್ದರಿಂದ ಕುರ್ಚಿಗೌರವ ಕಾಪಾಡುವುದರ ಜತೆಗೆ ನೈತಿಕ ಪ್ರಶ್ನೆಯಾಗಿ ಪರಿಗಣಿಸಿ ರಾಜೀನಾಮೆ ಕೊಡುವುದು ಉತ್ತಮ.